**<u>ದಿನಾಂಕಃ 05.06.2026 ರಂದು ಪ್ರಾ.ಸಾ.1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲುಃ ದಿಃ 07.02.2026 ರ ಆದೇಶದನ್ವಯ 2 ನೇ ಎದುರುದಾರ / ವಿಮಾ ಕಂಪೆನಿ ಪರ ಶ್ರೀ.ಎಂ.ಇ.ಎಂ. ವಕೀಲರಿಂದಃ</u>**

1) ನಾನು ನನ್ನ ಆದಾಯವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕುತ್ತೇನೆ ಎಂದರೆ ಸರಿ. ಸದರಿ ನನ್ನ ಬ್ಯಾಂಕ್ ಖಾತೆ ಕರ್ನಾಟಕ ಬ್ಯಾಂಕ್ ನಲ್ಲಿ ಇದೆ. ಸದರಿ ಖಾತೆಗೆ ಸಂಬಂಧಿಸಿದ ಪಾಸ್ ಪುಸ್ತಕವನ್ನು ಹಾಜರುಪಡಿಸಬಲ್ಲೆ. ನಾನು ಈಗಲೂ ಟೈಲರ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಈಗ ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2) ಕೆಎ-**09**-ಜೆಸಿ-**0304** ಮೋಟರ್ ಸೈಕಲ್ ನನ್ನ ಹೆಸರಿನಲ್ಲಿಯೇ ಇದೆ. ಅದಕ್ಕೆ ವಿಮಾ ಪಾಲಿಸಿಯನ್ನು ನನ್ನ ಗಂಡನೇ ಮಾಡಿಸಿರುವುದರಿಂದ ನನಗೆ ಅದರ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ. ನನಗೆ ಮೋಟರ್ ಸೈಕಲ್ ಚಾಲನೆ ಮಾಡಲು ಚಾಲನಾ ಪರವಾನಗಿ ಇದೆ. ಸದರಿ ಮೋಟರ್ ಸೈಕಲ್ ಗೆ ಸಂಬಂಧಿಸಿದ ಆರ್.ಸಿ, ವಿಮಾ ಪಾಲಿಸಿ ಮತ್ತು ನನ್ನ ಚಾಲನಾ ಪರವಾನಗಿಯನ್ನು ಹಾಜರುಪಡಿಸಬಲ್ಲೆ. ಮೈಸೂರು **1** ರಲ್ಲಿ ಇರುವ ಆರ್.ಟಿ.ಓ ಕಚೇರಿಯಿಂದ ನಾನು ಚಾಲನಾ ಪರವಾನಗಿಯನ್ನು ಪಡೆದುಕೊಂಡಿದ್ದೇನೆ. ನನ್ನ ಬಳಿ ಯಾವುದೇ ವಾಹನ ಚಾಲನಾ ಪರವಾನಗಿ

ಇಲ್ಲ ಎಂದರೆ ಸರಿಯಲ್ಲ.

3) ಅಪಘಾತ ಸ್ಥಳದ ರಸ್ತೆಯಲ್ಲಿ **3** ಬಾರಿ ವಾಹನಗಳು ಏಕ ಕಾಲದಲ್ಲಿ ಚಲಿಸಬಹುದು ಎಂದರೆ ಸರಿ. ಅಪಘಾತವು ಒಂದು ಸರ್ಕಲ್ ಬಳಿ ಆಗಿದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾವುದೇ ಸಿಗ್ನಲ್ ಇರುವುದಿಲ್ಲ. ಸರ್ಕಲ್ ಬಳಿ ವಾಹನ ದಟ್ಟಣೆ ಜಾಸ್ತಿ ಇರುತ್ತದೆ ಎಂದರೆ ಸರಿ. ಇದೇ ಕಾರಣದಿಂದ ಯಾವುದೇ ವಾಹನ ವೇಗವಾಗಿ ಹೋಗುವುದಕ್ಕೆ ಅವಕಾಶವಿಲ್ಲ ಎಂದರೆ ಸರಿಯಲ್ಲ, ಕೆಲವು ಬಾರಿ ವಾಹನ ದಟ್ಟಣೆ ಇರುವುದಿಲ್ಲ. ನನಗೆ ಮೋಟರ್ ಸೈಕಲ್ ಓಡಿಸುವುದಕ್ಕೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಇದೇ ಕಾರಣದಿಂದ ನಾನೇ ಮೋಟರ್ ಸೈಕಲ್ ಅನ್ನು ಅಡ್ಡಾದಿಡ್ಡಿಯಾಗಿ ಓಡಿಸಿ ಅಪಘಾತಕ್ಕೆ ಕಾರಣಳಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಯಾವುದೇ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ **1** ನೇ ಎದುರುದಾರರಿಂದ ಯಾವುದೇ ತಪ್ಪು ನಡೆದಿಲ್ಲ ಎಂದರೆ ಸರಿಯಲ್ಲ.

4) ಅಪಘಾತವಾದ ನಂತರ ನನಗೆ ಪ್ರಜ್ಞೆ ಇತ್ತು ಎಂದರೆ ಸರಿ. ನನ್ನನ್ನು ಅಪಘಾತದ ಸ್ಥಳದಲ್ಲಿ ಇದ್ದವರು ಅಲ್ಲೇ ಪಕ್ಕದ ಅರವಿಂದ ಆಸ್ಪತ್ರೆಗೆ ದಾಖಲಿಸಿದ್ದಾರೆ. ನನ್ನನ್ನು ಆಸ್ಪತ್ರೆಗೆ ದಾಖಲಿಸಿದವರ ಹೆಸರು ನೆನಪಿಲ್ಲ. ಅರವಿಂದ ಆಸ್ಪತ್ರೆಯಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ನಾನು ಹೆಚ್ಚಿನ

ಚಿಕಿತ್ಸೆಗೆ ದಾಖಲಾಗಿದ್ದೆನು. ಅಪಘಾತವಾದ ದಿನ ನನ್ನ ಗಂಡ ಮತ್ತು ತಾಯಿ ಆಸ್ಪತ್ರೆಗೆ ಬಂದಿದ್ದರು. ಕೆ.ಆರ್. ಆಸ್ಪತ್ರೆಯಲ್ಲಿ ನನಗೆ ಅಪಘಾತವಾದ ಬಗ್ಗೆ ವಿವರಗಳನ್ನು ಪಡೆದು ಬರೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು ಆಸ್ಪತ್ರೆಯಿಂದ ಪಡೆದುಕೊಂಡು ಹಾಜರುಪಡಿಸಬಲ್ಲೆ. ಅರವಿಂದ ಆಸ್ಪತ್ರೆಯವರು ನನ್ನ ಗಂಡ ಮತ್ತು ತಾಯಿಯ ಹೇಳಿಕೆ ಮಾಡಿಕೊಂಡಿದ್ದಾರೆಯೇ ಎಂದು ನನಗೆ ಗೊತ್ತಿಲ್ಲ. ಅಪಘಾತದ ದಿನವೇ ನನ್ನ ಗಂಡ ಅಥವಾ ತಾಯಿಯ ಮೂಲಕ ದೂರು ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

5) ಅರವಿಂದ ಆಸ್ಪತ್ರೆಯಿಂದ ಕೆ.ಆರ್. ಆಸ್ಪತ್ರೆಗೆ ಅಪಘಾತವಾದ ದಿನವೇ ಕರೆದುಕೊಂಡು ಹೋಗಿದ್ದಾರೆ. ಕೆ.ಆರ್. ಆಸ್ಪತ್ರೆಯಲ್ಲಿ ಪೋಲಿಸ್ ಔಟ್ ಪೋಸ್ಟ್ ಇದೆ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರಿಂದ ನಾನು ಅಪಘಾತದ ದಿನ ದೂರು ನೀಡಿಲ್ಲ ಎಂದರೆ ಸರಿಯಲ್ಲ, ಒಬ್ಬಳೇ ಓಡಾಡಬೇಕಾಗಿದ್ದರಿಂದ ಆ ದಿನ ದೂರು ನೀಡಲು ಸಾಧ್ಯವಾಗಿಲ್ಲ. ಅಪಘಾತ ನನ್ನ ತಪ್ಪಿನಿಂದಲೇ ಆಗಿದ್ದರೂ, ಕೆಎ-**09**-ಹೆಚ್ ಎಸ್-**4651** ಮೋಟರ್ ಸೈಕಲ್ ನ ಮಾಲೀಕರ ಜೊತೆ ಶಾಮೀಲಾಗಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಜೊತೆ ಶಾಮೀಲಾಗಿ ಪೋಲಿಸ್ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

6) ಅಪಘಾತದ ಪರಿಣಾಮವಾಗಿ ನನ್ನ ಬಲಗೈ ಬುಜದ ಬಳಿ ಸರ್ಜರಿ ಆಗಿದೆ. ನನ್ನ ದೇಹದ ಇತರೆ ಕಡೆಗಳಲ್ಲಿ ಸಣ್ಣ ಪುಟ್ಟ ಗಾಯಗಳು ಆಗಿವೆ. ನನ್ನ ಬಲಗೈ ಬುಜದಲ್ಲಿ ಪ್ಲೇಟ್ ಅಳವಡಿಸಿದ್ದಾರೆ. ಅದನ್ನು ಇಲ್ಲಿಯ ವರೆಗು ತೆಗೆದಿರುವುದಿಲ್ಲ. ಮೂಳೆ ಮುರಿತವಾದ ಜಾಗದಲ್ಲಿ ಮೂಳೆ ಕೂಡಿಕೊಂಡಿದೆ ಎಂದರೆ ಸರಿ, ಆದರೆ ನನಗೆ ಈಗಲೂ ನೋವು ಬರುತ್ತಿದೆ. ಪ್ಲೇಟ್ ತೆಗೆಯ ಬಹುದು ಎಂದು ವೈದ್ಯರು ಹೇಳಿದ್ದಾರೆ ಎಂದರೆ ಸರಿಯಲ್ಲ.

7) ನನಗೆ ಸಂಪೂರ್ಣ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿಲ್ಲ. ನನಗೆ ಮುಂದುವರಿದ ಚಿಕಿತ್ಸೆಯ ಅಗತ್ಯ ಇರುವುದಿಲ್ಲ ಎಂದರೆ ಸರಿಯಲ್ಲ, ನಾನು ಈಗಾಗಲೇ ಎರಡು ಬಾರಿ ವೈದರ ಬಳಿ ಹೋಗಿದ್ದೇನೆ. ನನಗೆ ಬುಜದ ಬಳಿ ನೋವು ಬರುತ್ತಿದ್ದರಿಂದ ಹೋಗಿದ್ದೇನೆ. ಚಿಕಿತ್ಸೆಗೆ ರೂ.**30,000/-** ಖರ್ಚು ತಗಲಿದೆ ಎಂದು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತಕ್ಕೆ ಮೊದಲು ಇದ್ದಂತೆ ಆರೋಗ್ಯವಾಗಿಯೇ ಇದ್ದರೂ ಅಪಘಾತದ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ನೇ ಎದುರುದಾರ ಪರ ವಕೀಲರಿಂದ:**

1 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು

ಹಾಜರಿದ್ದಾರೆ. ಆದ್ದರಿಂದ 1 ನೇ ಎದುರುದಾರರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.